
ತುಂಡಾಗಿವೆ. ನಕ್ಸಲ್ ಚಳವಳಿಯ ಶಿಖರದಲ್ಲಿ ಅತಿ ಎಡಪಂಥೀಯ ವಿಚಾರಧಾರೆಯ ಸುಮಾರು 45 ಬಿಡಿ ಗುಂಪುಗಳಿದ್ದುವು ಎಂದು ಪ್ರಕಾಶ್ ಕಾರತ್ 'ಮಾರ್ಕ್ಸಿಸ್ಟ್' ಪತ್ರಿಕೆಯ ಒಂದು ಲೇಖನದಲ್ಲಿ ಹಿಂದೆ ಉಲ್ಲೇಖಿಸಿದ್ದರು. ಇದು ವಿಚಾರಧಾರೆಯ ಮಥನಕ್ಕೆ ಒಡ್ಡಿ, ಭಿನ್ನಾಭಿಪ್ರಾಯದಿಂದ ಛಿದ್ರಕೊಂಡ ಗುಂಪುಗಳು.

ಬಲಪಂಥೀಯ ಅಥವಾ ಹಿಂದುತ್ವವಾದಿಗಳ ಕಡೆಯಿಂದ ಬಂದ ಸಾಹಿತ್ಯ ಮತ್ತು ಸಂಸ್ಕೃತಿ ವಿಚಾರಧಾರೆಗಿಂತ ನಂಬಿಕೆಗೆ ಸಂದದ್ದರಿಂದ–ಜ್ಞಾನ ಮಾರ್ಗವನ್ನು ಅಪ್ಪದೇ ಭಕ್ತಿಮಾರ್ಗವನ್ನು ಹಿಡಿದದ್ದರಿಂದ, ಭಿನ್ನಾಭಿಪ್ರಾಯ– ವಿಚಾರಧಾರೆಯ ಪರ್ಯಾಯ ಉಲ್ಲೇಖ ಮತ್ತು ವಾದವಿವಾದಗಳಿಗೆ ಹೆಚ್ಚಿನ ಜಾಗ ಇರುವುದಿಲ್ಲ. ಹೀಗಾಗಿಯೇ ಹಿಂದುತ್ವ ಮತ್ತು ಅದಕ್ಕೆ ಸಂಬಂಧಿಸಿದ ವಿಚಾರಧಾರೆಯನ್ನು ವಿಶ್ಲೇಷಿಸುವ ಮತ್ತು ಚರ್ಚಿಸುವ ಸಾಹಿತ್ಯ ವಿಪುಲವಾಗಿ ಬರಲಿಲ್ಲ. ಬಂದರೂ ಆ ಚೌಕಟ್ಟಿನೊಳಗೇ ಅದರ ವಿಶ್ಲೇಷಣೆ ಮತ್ತು ಮಥನ ನಡೆಯಲಿಲ್ಲ. ಹಿಂದುತ್ವವಾದಿ ಸಾಹಿತ್ಯ ಒಂದಕ್ಕೊಂದು ಪೂರಕವಾಗಿದ್ದು, ಅಲ್ಲಿ ಚರ್ಚೆ ಮತ್ತು ವಿರೋಧ ಎಡಪಂಥೀಯ ಮತ್ತು ಸಮಾಜವಾದದ ವಿಚಾರಧಾರೆಯ ವಿರುದ್ಧವಾಗಿತ್ತೇ ಹೊರತು, ಅದೇ ವಿಚಾರಧಾರೆಯಿಂದ ಹೊಮ್ಮಿದ ಭಿನ್ನ ವಾದವಿವಾದಗಳು ಹೆಚ್ಚಾಗಿ ಬರಲಿಲ್ಲ. ಕಳೆದೆರಡು ದಶಕಗಳಲ್ಲಿ ನಮಗೆ ಬಲಪಂಥೀಯ ಎನ್ನಿಸುವಂತಹ ಸಾಕಷ್ಟು ಸಾಹಿತ್ಯ ಸಿಕ್ಕಿದೆ. ಆದರೆ ಆ ಸಾಹಿತ್ಯ ಹೆಚ್ಚಾಗಿ ಜೀವನ ಚರಿತ್ರೆಗೆ ಮತ್ತು ವ್ಯಕ್ತಿಗಳ ಪಾತ್ರದ ವಿಶ್ಲೇಷಣೆಗೆ ತಮ್ಮನ್ನು ಒಡ್ಡಿಕೊಂಡಿವೆಯೇ ಹೊರತು ವಿಚಾರಧಾರೆಯಾಗಿ ಸಾಕಷ್ಟು ಮಥನಕ್ಕೆ ಒಳಗಾಗಿಲ್ಲ. ಉದಾಹರಣೆಗೆ, ಜೆ. ಸಾಯಿ ದೀಪಕ್ ಬರೆಯುತ್ತಿರುವ ಭಾರತದ ಸಾಂಸ್ಕೃತಿಕ ಚರಿತ್ರೆಯನ್ನು, ಎರಡು ಭಾಗದ ಪುಸ್ತಕಗಳನ್ನು ಬಲಪಂಥಿಯ ವಿದ್ವಾಂಸರು ಹೆಚ್ಚಿನ ವಿಶ್ಲೇಷಣೆಗೆ ಒಡ್ಡಿಲ್ಲ. ಸಾಯಿ ದೀಪಕ್ ಕೂಡಾ, ಒಂದು ಮಟ್ಟದಲ್ಲಿ ಎಡಪಂಥೀಯ ಎನ್ನಿಸುಕೊಳ್ಳುವ ವಿದ್ವಾಂಸರ ನಿಲುವುಗಳನ್ನು ಪ್ರಶ್ನಿಸುತ್ತಾರೆಯೇ ಹೊರತು, ಬಲಪಂಥೀಯ ವಿಚಾರಧಾರೆಯಲ್ಲಿರಬಹುದಾದ ಅಂತರ್ ವಿರೋಧಗಳನ್ನು ಹೆಚ್ಚಾಗಿ ಬಿಡಿಸಿ ನೋಡುವುದಿಲ್ಲ.




ಎಷ್ಟರಮಟ್ಟಿಗೆ ಅವರು ತಮ್ಮ ವಿಚಾರಗಳನ್ನು ನಂಬಿಕೆಯ ಮಟ್ಟಕ್ಕೆ ಒಯ್ಯುತ್ತಾರೆಂದರೆ, ಒಂದು ಸಂದರ್ಶನದಲ್ಲಿ ರೊಮೀಲಾ ಥಾಪರ್ ಮತ್ತು ಇರ್ಫಾನ್ ಹಬೀಬರಂಥಹ ಚರಿತ್ರಕಾರರು ದೇಶ ಬಿಟ್ಟುಹೋಗಲು ಏಕದಿಕ್ಕಿನ ಮಾರ್ಗದ ಟಿಕೆಟ್ಟನ್ನು ಕೊಡಬೇಕು ಎನ್ನುತ್ತಾರೆ. ಭಕ್ತಿ ಮಾರ್ಗದಲ್ಲಿ ಬಹಿಷ್ಕಾರವಿರುತ್ತದೆ. ಜ್ಞಾನಮಾರ್ಗದಲ್ಲಿ ವಾದವಿವಾದ, ವಿಚಾರ ವಿನಿಮಯಗಳಿರುತ್ತವೆ.

ಈ ಹಿನ್ನೆಲೆಯಲ್ಲಿ ಬಲಪಂಥೀಯ ಸಾಂಸ್ಕೃತಿಕ ಜಗತ್ತು ಹೇಗೆ ರೂಪುಗೊಳ್ಳುತ್ತಿರಬಹುದು – ಅದರಲ್ಲೂ 2014ರಿಂದ ಪ್ರಖರವಾಗಿ ಕಾಣಿಸಿಕೊಳ್ಳುತ್ತಿರುವ, ತರ್ಕಕ್ಕಿಂತಲೂ ಹೆಚ್ಚು ಗಟ್ಟಿದನಿಯ ವಾದಗಳನ್ನು ಅದರ ಸುತ್ತ ನಂಬಿಕೆಗಳನ್ನು ಹೇಗೆ ಕಟ್ಟುವ ಪ್ರಯತ್ನಗಳು ನಡೆಯುತ್ತಿವೆ ಎನ್ನುವುದನ್ನು ಮೂರು ವ್ಯಕ್ತಿಗಳ ಅಧ್ಯಯನದ ಮೂಲಕ ಪುರೋಹಿತ್ ಅವಲೋಕಿಸುತ್ತಾರೆ. ಚಿಕ್ಕಂದಿನಲ್ಲಿ ವೈಯಕ್ತಿಕ ಮಟ್ಟದಲ್ಲಿ ಆದ ಯಾವುದೋ ಘಟನೆಯನ್ನು ಸಾರ್ವತ್ರಿಕ ಸತ್ಯ ಎನ್ನಿಸುತ್ತಾ, ಆಗಾಗ ಕೇಳಿಬರುತ್ತಿರುವ ಮಾತುಗಳು, ಚರಿತ್ರೆಯನ್ನು ಹೊಸದಾಗಿ–ಭಿನ್ನವಾಗಿ